2000-00ಗಳನ್ನು ಕಂಪನಿಗೆ ಸಂದಾಯ ಮಾಡದೆ ಹಣವನ್ನು ದುರಪಯೋಗ ಪಡಿಸಿಕೊಂಡಿರುತ್ತಾರೆ. ಈ ಬಗ್ಗೆ ಇವರ ವಿರುದ್ಧ ಶಿಸ್ತು ಕ್ರಮ ಜರುಗಿಸಲಾಗುತ್ತಿದೆ.

ಆ. ದಿನಾಂಕ: 11:12-10-2002ರಂದು ಕೊಳ್ಳೆಗಾಲ ರೇಷ್ಮೆಗೂಡಿನ ಮಾರುಕಟ್ಟೆ ದಿ:13:15-10-2002ರಂದು ಸಂತೇಮರಳ್ಳಿ ರೇಷ್ಮೆಗೂಡಿನ ಮಾರುಕಟ್ಟೆ ದಿನಾಂಕ:

.....

ದಿನಾಂಕ 14:15-10-2002 ಮತ್ತು 17-10-2002ರಂದು ಚಾಮರಾಜನಗರ ರೇಷ್ಮೆ ಗೂಡಿನ ಮಾರುಕಟ್ಟೆಯಲ್ಲಿ ರೀಲರುಗಳು ಮುಷ್ಕರ ಹಾಡಿದ್ದು ಸಂತೆಮರಳ್ಳಿ ಕೊಳ್ಳೆಗಾಲ ಮತ್ತು ಮಾರಳ್ಳಿ ಸರ್ಕಾರಿ ರೇಷ್ಮೆ ಕಾರ್ಖಾನೆಗಳು ಈ ಮಾರುಕಟ್ಟೆಯಲ್ಲಿ ಭಾಗವಹಿಸಿ 28,761-00 ಕೆಜಿ ರೇಷ್ಮೆ ಗೂಡು ಖರೀದಿಸಿದೆ.

ಈ ಗೂಡುಗಳಿಂದ ಉತ್ಪಾದಿಸಿರುವ ರೇಷ್ಮೆ ನ್ನು ಮಾರಾಟವಾಗದ ಕಾರಣ ಲಾಭ ಅಥವಾ ನಷ್ಟದ ಪ್ರಮಾಣ ಖಚಿತವಾಗಿ ಈ ಹಂತದಲ್ಲಿ ಹೇಳಲಾಗುವುದಿಲ್ಲ.

ತರೀಕೆರೆ ತಾಲ್ಲೂಕು ಅಜ್ಜಂಪುರ ಹೋಬಳಿ ಅಮೃತ್ ಮಹಲ್ ಕಾವಲ್ ಪಶು ಆಸ್ಪತ್ರೆಯನ್ನು ಸೊಲ್ಲಾಪುರಕ್ಕೆ ಸ್ಥಳಾಂತರಿಸುವುದು

1810(2315): ಶ್ರೀ ನೀಲಕಂಠಪ್ಪ ಬಿ.ಆರ್. (ತರೀಕೆರೆ) : ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ತರೀಕೆರೆ ತಾಲ್ಲೂಕು ಅಜ್ಜಪುರ ಅಮೃತ್ ಮಹಲ್ ಕಾವಲ್‌ನಲ್ಲಿರುವ ಪಶುಸಂಗೋಪನೆ ಆಸ್ಪತ್ರೆಯನ್ನು ಸೊಲ್ಲಾಪುರಕ್ಕೆ ಸ್ಥಳಾಂತರಿಸಲು ಪ್ರಸ್ತಾವನೆ ಬಂದಿದೆಯೇ?

ಆ. ಬಂದಿದ್ದಲ್ಲಿ, ಯಾವಾಗ ಕಾರ್ಯಗತ ಮಾಡಲಾಗುವುದು?

ಶ್ರೀ ಎಂ. ಮಹದೇವ್ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು)

ಅ. ಇಲ್ಲ

ಆ. ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ಅಕ್ರಮ ಗಣಿಗಾರಿಕೆ

1811(2148): ಶ್ರೀ ಪಾಟೀಲ್ ಸಿದ್ದಲಿಂಗನಗೌಡ ಸಿದ್ದನಗೌಡ (ಮುಂಡರಗಿ) : ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ರಾಜ್ಯದಲ್ಲಿ ಅಕ್ರಮ ಗಣಿಗಾರಿಕೆ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ. ಬಂದಿದ್ದರೆ, ಅಕ್ರಮ ಗಣಿಗಾರಿಕೆ ನಡೆಯುತ್ತಿರುವುದನ್ನು ತಡೆಯಲು ತೆಗೆದುಕೊಂಡ ಕ್ರಮಗಳಾವುವು (ವಿವರ ನೀಡುವುದು)?

ಶ್ರೀ ವಿ. ಮುನಿಯಪ್ಪ (ಗಣಿ ಮತ್ತು ಭೂವಿಜ್ಞಾನ ಸಚಿವರು)

ಅ. ರಾಜ್ಯದ ಕೆಲವು ಪ್ರದೇಶಗಳಲ್ಲಿ ಅಕ್ರಮ ಗಣಿಗಾರಿಕೆ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ. ರಾಜ್ಯದ ಕೆಲವು ಜಿಲ್ಲೆಗಳಲ್ಲಿ ಅಕ್ರಮವಾಗಿ ಮರಳು ತೆಗೆಯುವುದು, ಜೆಲ್ಲಿ ತೆಗೆಯುವುದು ಮತ್ತು ಗ್ರಾನೈಟ್ ತೆಗೆಯುವುದನ್ನು ತಡೆಗಟ್ಟಲು ಕ್ರಮತೆಗೆದುಕೊಳ್ಳಲಾಗಿದೆ. ಅನಧಿಕೃತ ಗಣಿಗಾರಿಕೆ ನಡೆಸುತ್ತಿದ್ದವರಿಗೆ ತಿಳುವಳಿಕೆ ನೋಟೀಸ್ ನೀಡಿ, ಸದರಿ ಪ್ರದೇಶಗಳಲ್ಲಿ ಸಕ್ರಮವಾಗಿ ಗಣಿಗಾರಿಕೆ ನಡೆಸಲು ಅವರುಗಳಿಂದ ಅರ್ಜಿ ಪಡೆದು ಗಣಿ ಗುತ್ತಿಗೆಗಳನ್ನು ನೀಡಲಾಗುತ್ತಿದೆ. ಅಕ್ರಮ

ಗಣಿಗಾರಿಕೆ ನಡೆಸಿ, ಅಕ್ರಮವಾಗಿ ಖನಿಜ ಸಾಗಾಣೆ ಮಾಡುತ್ತಿದ್ದ ವಾಹನಗಳನ್ನು ತಪಾಸಣೆ ಮಾಡಿ ರೂ. 16,39,112-00 ದಂಡವನ್ನು ಈ ವರ್ಷದ ನವೆಂಬರ್ 2002 ಅಂತ್ಯದವರೆಗೆ ವಸೂಲಿ ಮಾಡಲಾಗಿದೆ. ರಾಜ್ಯದ ವಿವಿದೆಡೆಗಳಲ್ಲಿ ಏಳು ಪ್ರಕರಣಗಳನ್ನು ಪೊಲೀಸ್ ಠಾಣೆಗಳಲ್ಲಿ ದಾಖಲು ಮಾಡಲಾಗಿದೆ. ಅಕ್ರಮ ಸಾಗಾಣಿಕೆ ತಡೆಗಟ್ಟಲು ರಾಜ್ಯದಲ್ಲಿ ವಿವಿಧ ಪ್ರದೇಶಗಳಲ್ಲಿ ತನಿಖಾ ಠಾಣೆಗಳನ್ನು ಸ್ಥಾಪಿಸಲಾಗಿದೆ. ಇದಲ್ಲದೆ ಒಂದು ಸಂಚಾರಿ ತನಿಖಾ ತಂಡವನ್ನು ಸೃಷ್ಟಿಸಲಾಗಿದೆ. ಹಾಗೂ ಜಿಲ್ಲೆಯಲ್ಲಿ ಅಲ್ಲಿನ ಅಧಿಕಾರಿಗಳು ಆಗಿಂದಾಗ್ಗೆ ಅನಿರೀಕ್ಷಿತ ತಪಾಸಣೆಗಳನ್ನು ಕೈಗೊಳ್ಳುವ ವ್ಯವಸ್ಥೆ ಮಾಡಲಾಗಿದೆ.

ರಾಜ್ಯದಲ್ಲಿರುವ ಪಶುಪಾಲನಾ ಆಸ್ಪತ್ರೆಗಳು

1812(2150): ಶ್ರೀ ಪಾಟೀಲ ಸಿದ್ದಲಿಂಗನಗೌಡ ಸಿದ್ದನಗೌಡ ಮುಂಡರಗಿ) :

ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ರಾಜ್ಯದಲ್ಲಿರುವ ಪಶು ಆಸ್ಪತ್ರೆ, ಪಶುಚಿಕಿತ್ಸಾಲಯ, ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರ ಹಾಗೂ ಕೃತಕ ಗರ್ಭಧಾರಣಾ ಉಪ ಕೇಂದ್ರಗಳ ಸಂಖ್ಯೆ ಎಷ್ಟು: (ತಾಲ್ಲೂಕುವಾರು ವಿವರ ನೀಡುವುದು)

ಆ. ಅವುಗಳಲ್ಲಿ ವೈದ್ಯರು ಹಾಗೂ ಇತರೆ ಹುದ್ದೆಗಳು ಖಾಲಿ ಇರುವ ಆಸ್ಪತ್ರೆಗಳ ವಿವರ ತಾಲ್ಲೂಕುವಾರು ನೀಡುವುದು:

ಇ. ಖಾಲಿ ಇರುವ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು?

ಶ್ರೀ ಎಂ. ಮಹದೇವ್ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು)

ಅ. ಅನುಬಂಧ - 1ರಲ್ಲಿ ನೀಡಲಾಗಿದೆ.

ಆ. ಅನುಬಂಧ - 2ರಲ್ಲಿ ನೀಡಲಾಗಿದೆ.

ಇ. ಖಾಲಿ ಹುದ್ದೆಗಳನ್ನು ಮುಂಬಡ್ತಿ, ನೇರನೇಮಕಾತಿ, ಅನುಕಂಪ ಆಧಾರದ ಮೇಲೆ ನೇಮಕ ಹಾಗೂ ಇತರೆ ಇಲಾಖೆಗಳಿಂದ ಮರುಹೊಂದಾಣಿಕೆ ಮೇಲೆ ಭರ್ತಿ ಮಾಡಲು ಕ್ರಮಕೈಗೊಳ್ಳಲಾಗುವುದು.

ಅನುಬಂಧ - 1

ತಾಲ್ಲೂಕುವಾರು ಪಶುವೈದ್ಯಕೀಯ ಸಂಸ್ಥೆಗಳ ವಿವರಗಳು

ಕ್ರ.	ತಾಲ್ಲೂಕು	ಪ.ಆ	ಪ.ಚಿ	ಪ್ರಾ.ಪ.ಚಿ	ಕೃ.ಗ.ಕೇಂದ್ರ	ಸಂ.ಪ.ಚಿ.	ಒಟ್ಟು
			ಬೆಂಗಳೂರು ನಗರ				
1.	ಬೆಂಗಳೂರು ದಕ್ಷಿಣ	7	10	8	2	1	28
2.	ಬೆಂಗಳೂರು ಉತ್ತರ	7	17	13	5	1	43
3.	ಬೆಂಗಳೂರು ಪೂರ್ವ	3	16	2	7	-	28
4.	ಆನೇಕಲ್	3	6	4	10	1	24
	ಒಟ್ಟು	20	49	27	24	3	123